# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 462 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.08.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಇ-ಸ್ವತ್ತು (e-Swathu) ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೊರಡಿಸಿರುವ 44 FAQ /ಮಾರ್ಗಸೂಚಿಗಳನ್ನು ಯಾವ ತಾಂತ್ರಿಕ ಹಾಗೂ ಕಾನೂನು ತಜ್ಞರ ಸಲಹೆಯ ಮೇರೆಗೆ ಸಿದ್ಧಪಡಿಸಲಾಗಿದೆ; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ಅನ್ನು ದಿನಾಂಕ: 17.10.2025 ರಂದು ಅಧಿಸೂಚಿಸಲಾಗಿದ್ದು, ಈ ನಿಯಮಗಳಿಗೆ ಸಂಬಂಧಿಸಿದಂತೆ ತರಬೇತುದಾರರ ತರಬೇತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ, ಉಪ ಕಾರ್ಯದರ್ಶಿಗಳ, ಕಾರ್ಯನಿರ್ವಾಹಕ ಅಧಿಕಾರಿಗಳ ಮತ್ತು ಚುನಾಯಿತ ಸದಸ್ಯರಿಗೆ ಆಯೋಜಿಸಲಾದ ತರಬೇತಿಗಳಲ್ಲಿ ಹಾಗೂ ಇ-ಸ್ವತ್ತು ಸಲಹಾ ಸಮಿತಿ ಮತ್ತು ನಿರ್ದೇಶಕರು ಇ-ಆಡಳಿತ, ಹಾಗೂ ಇಲಾಖೆಯ ಕಾನೂನು ಸಲಹೆಗಾರರ ಸಲಹೆಗಳ ಅನ್ವಯ FAQ ಗಳನ್ನು ಹೊರಡಿಸಲಾಗಿರುತ್ತದೆ. |
| (ಆ) | ಈ ಮಾರ್ಗಸೂಚಿಗಳನ್ನು ಹೊರಡಿಸುವಾಗ ಜಿಲ್ಲಾವಾರು ಭೌಗೋಳಿಕ, ಕಂದಾಯ, ತೆರಿಗೆ ಹಾಗೂ ಕರಾವಳಿ ಪ್ರದೇಶಗಳ ವಿಶೇಷ ಭಿನ್ನ ಪರಿಸ್ಥಿತಿಗಳನ್ನು ಪರಿಗಣಿಸಲಾಗಿದೆಯೇ; ಯಾವುದೇ ಹೊಸ ತಂತ್ರಾಂಶ ಅನುಷ್ಠಾನ ಪೂರ್ವದಲ್ಲಿ ಪೈಲೆಟ್ ಯೋಜನೆಯಡಿ ಕರಾವಳಿ ಜಿಲ್ಲೆಗಳನ್ನು ಪರಿಗಣಿಸಲಾಗುತ್ತಿಲ್ಲದಿರುವುದಕ್ಕೆ ಕಾರಣಗಳೇನು; | FAQ ಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮ ಪಂಚಾಯಿತಿಗಳಿಗೆ ಹಾಗೂ ಕರಾವಳಿ ಜಿಲ್ಲೆಗೆ ಸಂಬಂಧಿಸಿದ ಪರಿಸ್ಥಿತಿಯನ್ನು ಸಹ ಪರಿಗಣಿಸಿ ಹೊರಡಿಸಲಾಗಿರುತ್ತದೆ.<br><br>FAQ ಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ, ಉಪಕಾರ್ಯದರ್ಶಿಗಳ, ಕಾರ್ಯನಿರ್ವಾಹಕ ಅಧಿಕಾರಿಗಳ ಮತ್ತು ಚುನಾಯಿತ ಸದಸ್ಯರಿಗೆ ಆಯೋಜಿಸಲಾದ ತರಬೇತಿಗಳಿಂದ ಕ್ರೋಢೀಕರಿಸಲಾಗಿರುತ್ತದೆ. |
| (ಇ) | ಪ್ರಸ್ತುತ FAQ ಗಳಲ್ಲಿನ ಅಸ್ಪಷ್ಟತೆಗಳಿಂದ ಆಸ್ತಿ ತೆರಿಗೆ, ದಾಖಲಾತಿ ಹಾಗೂ ಇ-ಸ್ವತ್ತು ನೋಂದಣಿಯಲ್ಲಿ ಸಾರ್ವಜನಿಕರಿಗೆ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಗೊಂದಲ ಉಂಟಾಗುತ್ತಿರುವುದು ಹಾಗೂ ಪಂಚಾಯತಿಗಳ ತೆರಿಗೆ ನಿರ್ಧಾರಣೆಯಲ್ಲಿ ವ್ಯತ್ಯಾಸವುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿಲ್ಲ. |

| | | |
|---|---|---|
| (ಈ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲ ಆಶಯಗಳನ್ನು ಬದಿಗಿರಿಸಿ ಈಗಾಗಲೇ ಬೇರೆ ಬೇರೆ ಇಲಾಖೆಗಳ ಪ್ರತ್ಯೇಕ ಸುತ್ತೋಲೆಗಳ ಮೂಲಕ ಗ್ರಾಮ ಪಂಚಾಯತಿ ಮಟ್ಟದಲ್ಲಿ ಭೂಪರಿವರ್ತನೆ, ಸಾರ್ವಜನಿಕ ರಸ್ತೆ, ಭೂನಕ್ಷೆ, ಬಡಾವಣೆ ನಕ್ಷೆ ಅನುಮೋದನೆ, ನಮೂನೆ ೯/೧೧, ಕಟ್ಟಡ ಪರವಾನಿಗೆ, ಪ್ರಾರಂಭಿಕ ಪ್ರಮಾಣ ಪತ್ರ, ಪೂರ್ಣತಾ ಪತ್ರ, ಕಟ್ಟಡ ಸಂಖ್ಯೆ ಇತ್ಯಾದಿ ಸೇವಗಳು ತುಂಬಾ ಕ್ಲಿಷ್ಟಕರವಾಗಿದ್ದು ಮುಂದಿನ ದಿನಗಳಲ್ಲಿ ಜಿಲ್ಲಾವಾರು ವ್ಯತ್ಯಾಸಗಳನ್ನು ಪರಿಗಣಿಸಿ ಸ್ಪಷ್ಟ ಹಾಗೂ ಏಕರೂಪದ ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? | ಬೇರೆ ಬೇರೆ ಇಲಾಖೆಗಳ ಸೇವೆಗಳನ್ನು ಒಂದೇ ವೇದಿಕೆಯಡಿ ನೀಡುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ (ಇ-ಆಡಳಿತ) ULMS ತಂತ್ರಾಂಶವನ್ನು ಅಭಿವೃದ್ಧಿಗೊಳಿಸುವ ಕಾರ್ಯ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಗ್ರಾಅಪ 793 ಗ್ರಾಪಂಅ 2026

**(ಈಶ್ವರ ಬಿ. ಖಂಡ್ರೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.